ಅಷ್ಟೊಂದು ಚೀಪ್ ಎನಿಸುತ್ತದಾ ಇವರಿಗೆ ಎಂದು ಸಿಟ್ಟು ಬಂತು, ಮುಜುಗರವೂ ಆಯಿತು. ಆಗಲೇ ಸೂರಜ್, ತನ್ನ ಸೂರಜನೂ ಹೀಗೆಯೇ ಬೇರೆ ಹೆಣ್ಣುಗಳೊಂದಿಗೆ ವ್ಯವಹರಿಸುತ್ತಿರಬಹುದೆ ಎನಿಸಿ ಪರೀಕ್ಷಿಸಿದರೆ ಸೂರಜ್ ಆನ್‌ಲೈನಿನಲ್ಲಿದ್ದುದು ಕಂಡು ಬಂತು. ಆತನೂ ಹೀಗೆ ಯಾವುದೋ ಹೆಣ್ಣಿನೊಡನೆ ಚಾಟ್ ಮಾಡುತ್ತಿದ್ದು, ಆಕೆಯೂ ತನ್ನ ಹಾಗೆ ಮುಜುಗರ ಅನುಭವಿಸುತ್ತಿರಬಹುದೆ? ಹಾಗೆ ನೋಡಿದರೆ ಈ ವಿಕ್ರಮ್ ಹೇಳುವುದರಲ್ಲೂ ಏನು ತಪ್ಪಿದೆ? ಚಾಟ್ ಮಾಡಿದ ಮಾತ್ರಕ್ಕೆ ತಾನೇನೂ ಯಾರ ಜೊತೆ ಅಫೇರ್ ಬೆಳೆಸಿಕೊಳ್ಳುತ್ತಿಲ್ಲವಲ್ಲ. ಹೀಗೇ ಒಂದಷ್ಟು ಸತಾಯಿಸಿ ತಾನೂ ಮಜಾ ತೆಗೆದುಕೊಳ್ಳೋಣ, ತಪ್ಪೇನಿದೆ ಎನಿಸಿ ಮತ್ತೆ ಮೊಬೈಲ್ ಕೈಗೆತ್ತಿಕೊಂಡಳು. ಅಷ್ಟು ಹೊತ್ತಿಗಾಗಲೇ ಆತನಿಂದ ಮೂರ್ನಾಲ್ಕು ಮೆಸೇಜುಗಳು ಬಂದಿದ್ದವು. "ಹೆಲ್ಲೋ, ಏನು ಯೋಚಿಸುತ್ತಿದ್ದೀರಿ? ಇವನಾವ ಪ್ರಾಣಿ ಗಂಟು ಬಿದ್ದ ಎಂತಲಾ. ಭಯ ಪಡಬೇಡಿ, ನಾನೇನೂ ನಿಮ್ಮ ಫೋನ್ ನಂಬರ್ ಕೇಳಿಕೊಂಡು ನಿಮ್ಮನ್ನ ಭೇಟಿಯಾಗು ಎಂದೇನೂ ಕೇಳುವುದಿಲ್ಲ." ಎಲಾ ಇವನ ನನ್ನ ಮನಸ್ಸಿನಲ್ಲಿದ್ದುದನ್ನ ಇವ ಹೇಗೆ ಓದಿದ ಎಂದು ಪ್ರಣತಿ ಆಶ್ಚರ್ಯಪಡುತ್ತಲೇ ಮುಂದಿನ ಮೆಸೇಜು ನೋಡಿದಳು. "ನಾನೂ ಸಂಸಾರಸ್ಥ, ಮುದ್ದಿನ ಹೆಂಡತಿ, ಮುದ್ದಾದ ಮಗು ಎಲ್ಲಾ ಇದ್ದು ನೆಮ್ಮದಿಯಿಂದ ಇರುವವನೇ. ಆದರೂ ಸ್ನೇಹ ಬೆಳೆಸುವುದು ನನ್ನ ಹಾಬಿ. ಹಾಗೇ ನಿಮ್ಮದೂ ಇರಬಹುದು ಎಂದುಕೊಂಡಿದ್ದೆ. ಆದರೆ ನೀವೇಕೊ ಬಹಳ ರಿಸರ್ವ್ ಎನಿಸುತ್ತಿದೆ."

"ಪ್ರಣತೀ ನೀವು ಹೆಣ್ಣುಮಕ್ಕಳು ಎಷ್ಟು ಮುಂದುವರಿದರೂ ನಿಮ್ಮಲ್ಲಿ ಗಂಡಸರ ಅದೂ ಅಪರಿಚಿತ ಗಂಡಸರ ಬಗ್ಗೆ ಶತ ಶತಮಾನಗಳಿಂದ ಬೇರೂರಿರುವ ಭಯ ಹಾಗೇ ಇದೆ. ಇನ್ನೂ ಅದನ್ನ ಕಿತ್ತು ಹಾಕಲು ನಿಮ್ಮಂತಹವರಿಂದ ಆಗಿಲ್ಲ. ಬಹುಶಃ ಎಂದೂ ಆಗುವುದೂ ಇಲ್ಲವೇನೋ. ಇದಕ್ಕೆ ನೀವೇ, ಹೆಣ್ಣುಗಳೇ ಕಾರಣ ಅಂತ ನಾನು ಹೇಳಿ ನಿಮ್ಮನ್ನ ಹರ್ಟ್ ಮಾಡಲಾರೆ. ನಾನು ನನ್ನಂತಹವರೂ ಅಷ್ಟೇ ಕಾರಣರಾಗಿದ್ದೇವೆ. ಟೈಂ ಪಾಸ್ ಆಗಬೇಕು, ಒಂದಷ್ಟು ಒಳ್ಳೆಯ ವಿಚಾರಗಳ ವಿನಿಮಯ ಆಗಬೇಕೂಂತ ನಿಮ್ಮಂತಹ ಕೆಲವರು ಈ ಸೋಷಿಯಲ್ ನೆಟ್‌ವರ್ಕ್‌ಗೆ ಬರ್ತೀರಿ. ಆದರೆ ಅಲ್ಲಿ ಎಲ್ಲಾ ಸರಿ ಇಲ್ಲ ಅಂತ ನಿಮ್ಮ ಆರನೆಯ ಇಂದ್ರಿಯ ಅದು ಹೇಗೆ ನಿಮ್ಮಂತಹವರನ್ನ ಎಚ್ಚರಿಸುತ್ತೋ ನಾ ಕಾಣೆ. ಬಂದ ಕೆಲವೇ ದಿನಗಳಲ್ಲಿ ಹಾಗೇ ಮಾಯವಾಗಿ ಬಿಡ್ತೀರಿ..." ಓದುತ್ತಾ ಹೋದಂತೆ ಪ್ರಣತಿಗೆ ಅರೇ ಈ ವಿಕ್ರಮನೆನ್ನುವ ಅಪರಿಚಿತ ವ್ಯಕ್ತಿ ತಾನೆಣಿಸಿದಂತೆ ಇಲ್ಲ ಎಂದು ಖಾತ್ರಿಯಾಗಿ ಮನಸ್ಸಿಗಾಗಿದ್ದ ಕಿರುಕುಳ, ಮುಜುಗರ ಎಲ್ಲಾ ಮರೆತು ತಾನು ಅವನ ಬಗ್ಗೆ ತಪ್ಪು ತಿಳಿದಿದ್ದಕ್ಕಾಗಿ ಸಾರಿ ಎಂದು ಅಕ್ಷರಗಳನ್ನ ಒತ್ತುವ ಹೊತ್ತಿಗೇ ಮತ್ತೊಂದು ಮೆಸೇಜನ್ನ ಹಾರಿಬಿಟ್ಟಿದ್ದನವನು. "ನನಗೆ ಗೊತ್ತು, ನನ್ನ ಬಗ್ಗೆ ನಿಮ್ಮ ಅಭಿಪ್ರಾಯ ಈಗ ಬದಲಾಗಿರುತ್ತೆ ಅಂತ. ಇದೇ ಇದೇ ನೀವು ಮಾಡೋ ತಪ್ಪು. ಐ ಡೋಂಟ್ ಲೈಕ್ ಟು ಚಾಟ್ ವಿಥ್ ಅನ್ನೋನ್ ಪರ್ಸನ್ಸ್ ಅಂದವರು ನನ್ನೆಲ್ಲಾ ಮೆಸೇಜುಗಳಿಗೆ ಉತ್ತರಿಸಿದ್ದಾದರೂ ಯಾಕೆ? ನನ್ನಿಂದ ಇರ್ರಿಟೇಟ್ ಆಗುತ್ತಿದೆಯೆಂದು ಹೇಳಿದವರು ನನ್ನನ್ನು ನಿಮ್ಮ ಲಿಸ್ಟಿನಿಂದ ಬ್ಲಾಕ್ ಮಾಡದೆ ಈಗಲೂ ನನ್ನ ಮೆಸೇಜುಗಳನ್ನ ಓದುತ್ತಲೇ ಇದ್ದೀರಿ. ಅದರರ್ಥ ನಿಮಗೆ ನನ್ನ ಸ್ನೇಹ ಬೇಕಾಗಿದೆ ಅಂತ ಅಲ್ಲವೆ? ಹಾ ಹಾ ಹಾ..."

ಪ್ರಣತಿಗೆ ತಟ್ಟನೆ ಕೆನ್ನೆಗೆ ಹೊಡೆದಂತಾಯ್ತು ಮತ್ತೇಕೋ ಈ ಆಸಾಮಿಯ ಮಾತುಗಳು ಕಿರಿಕಿರಿ ಮಾಡುವಂತಾಗುತ್ತಿದೆಯಲ್ಲಾ. ಹಾಳಾದವಳು ನಾನು ಇವನ ಜೊತೆ ಚಾಟ್ ಮಾಡಲು ಇಷ್ಟವಿಲ್ಲವೆಂದು ಮೆಸೇಜ್ ಕಳಿಸುವ ಬದಲು ನೇರವಾಗಿ ಬ್ಲಾಕ್ ಮಾಡಿದ್ದರೆ ಇಷ್ಟೆಲ್ಲಾ ಮಾತು